## 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು

ಓ.ಎಸ್.ನಂ.376/2016

ದಿನಾಂಕಃ21.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯುಃ3

**ಮುಖ್ಯ ವಿಚಾರಣೆಃ ಶ್ರೀ ವಾದಿ ಪರ ಶ್ರೀ ಎಎಂಆರ್ ವಕೀಲರಿಂದಃ-**

ನಾನು ವಾದಿ ಪರ ಸಾಕ್ಷಿಯಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಶ್ರೀ ಕೆಎಸ್ಆರ್ ವಕೀಲರಿಂದಃ**

ನಾನು ಎಸ.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದೇನೆ, ನನ್ನ ಸಾಕ್ಷಿ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿ ಸುತ್ತಮುತ್ತ ನನಗೆ ಸೇರಿದ ಆಸ್ತಿ ಇರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡಿರುವ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಅಸೆಸ್ಮೆಂಟ್ ನಂಬರನ್ನು ಹೇಳಲಾಗುವುದಿಲ್ಲ. ದಾವಾ ಆಸ್ತಿಯ ವಿಸ್ತೀರ್ಣವನ್ನು ಸಹ ಹೇಳಲಾಗುವುದಿಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ 1 ರಿಂದ 4ನೇ ಪ್ರತಿವಾದಿಗಳ ಆಸ್ತಿ ಬರುತ್ತದೆ. ದಾವಾ ಆಸ್ತಿಯ ಚಕ್ಕುಬಂದಿ ಪಶ್ಚಿಮಕ್ಕೆಃರಸ್ತೆ, ದಕ್ಷಿಣಕ್ಕೆಃ1ನೇ ಪ್ರತಿವಾದಿ ಆಸ್ತಿ, ಉತ್ತರಕ್ಕೆಃಕಾಶಿ ವಿಶ್ವನಾಥರವರ ಆಸ್ತಿ ಮತ್ತು ಪೂರ್ವಕ್ಕೆಃಸಣ್ಣ ತಿಮ್ಮಯ್ಯನವರ ಆಸ್ತಿ ಇರುತ್ತದೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ತಂತಿಬೇಲಿ ಇರುತ್ತದೆ. ಈಗ ದಾವಾ ಆಸ್ತಿಯ ದಿಕ್ಕಿನಲ್ಲಿ ತಂತಿಬೇಲಿ ಇದ್ದು, ಹಿಂದೆ ಕಾಡುಬೇಲಿ ಇತ್ತು. 1ನೇ ಪ್ರತಿವಾದಿಯು 4ನೇ ಪ್ರತಿವಾದಿಯಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಅದರ ಅಸೆಸ್ಮೆಂಟ್ ನಂಬರ್ ಗೊತ್ತಿಲ್ಲ. 1ನೇ ಪ್ರತಿವಾದಿ 4ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಯಲ್ಲಿ ಸ್ವಾಧೀನ ಇದ್ದಾರೆ ಅಂದರೆ, ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ವಾದಿ ಮತ್ತು ಕುಟುಂಬದವರು ತನ್ನ ಆಸ್ತಿಯ ವಿಚಾರವಾಗಿ ಜಗಳ ಮಾಡಿದ್ದಾರೆಂದು ಪೋಲೀಸರಿಗೆ 2016 ರಲ್ಲಿ ದೂರು ನೀಡಿದ್ದಾರೆ

ಅಂದರೆ ಸರಿ. ಪೋಲೀಸರು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದರು ಅಂದರೆ ಸರಿ. 4ನೇ ಪ್ರತಿವಾದಿಯು 5ನೇ ಪ್ರತಿವಾದಿಯಿಂದ ಖರೀದಿಸಿದ ಆಸ್ತಿಯ ವಿಸ್ತೀರ್ಣದ ಬಗ್ಗೆ ಮಾಹಿತಿ ಇರುವುದಿಲ್ಲ. 1ನೇ ಪ್ರತಿವಾದಿ 4ನೇ ಪ್ರತಿವಾದಿಯಿಂದ ಖರೀದಿಸಿದ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. 1 ರಿಂದ 4ನೇ ಪ್ರತಿವಾದಿಗಳು ವಿದ್ಯುತ್ ಕಾಂಟ್ರಾಕ್ಟ್ ಕೆಲಸ ಮಾಡುತ್ತಾರೆ ಮತ್ತು ಕಡೂರಿನಲ್ಲಿ ವಾಸ ಮಾಡುತ್ತಾರೆ. 1 ರಿಂದ 4ನೇ ಪ್ರತಿವಾದಿಗಳು ವಾದಿ ಕುಟುಂಬದವರು ಇಲ್ಲದಿದ್ದಾಗ ಬೇಲಿ ಮತ್ತು ನಿವೇಶನವನ್ನು ಖುಲ್ಲಾ ಮಾಡಿದ್ದನ್ನು ನಾನು ನೋಡಿರುವುದಿಲ್ಲ. 1ನೇ ಪ್ರತಿವಾದಿಯ ರಸ್ತೆಯ ಚಕ್ಕುಬಂದಿ ಹೇಳಲಾಗುವುದಿಲ್ಲ ಅಂದರೆ ಸರಿ. ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.